ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರಿಗೆ ಪೂರ್ತಿ ಪ್ರಶ್ನೆ ಹಾಕಬೇಕಾಗುತ್ತದೆ. ಏನೆಂದರೆ ಇದನ್ನೂ ಖಾಸಗಿ ಕಂಪನಿಯವರಿಗೆ ಕೊಟ್ಟುಬಿಡೋಣವೆ ಎಂದು. ಖಾಸಗಿ ವಲಯದಲ್ಲಿ ಇರತಕ್ಕ ಉದ್ದಿಮೆ ಏನು ಇದೆ, ಆವರು ಗಂಧದ ಕಡ್ಡಿಯನ್ನೂ ತಯಾರು ಮಾಡುತ್ತಾರೆ, ಎಕ್ಸ್‌ಪೋರ್ಟ್ ಕೂಡ ಮಾಡುತ್ತಾರೆ. ಆದರೆ ನಮ್ಮದು ಸಾರ್ವಜನಿಕ ಉದ್ದಿಮೆ. ಖಾಸಗಿಯವರು ಸಾವಿರಾರು ಜನಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಹಲವಾರು ರೀತಿಯ ಇನ್‌ಪುಟ್ಸ್ ಅಂತ ಏನು ನಾವು ಕರೆಯುತ್ತೇವೆ, ಅಂತಹ ಸುಗಂಧಗಳನ್ನು ತಂದು ಮಾಡುತ್ತಾರೆ. ಆದರೆ ನಮ್ಮ ಈ ಸಾರ್ವಜನಿಕ ಉದ್ದಿಮೆಯಲ್ಲಿ ಮೂಲ ಉದ್ದೇಶ ಇರುವಂತಹದ್ದು ಗಂಧದ ಎಣ್ಣೆಯನ್ನು ತೆಗೆಯುವಂತಹದ್ದು. ಅದರ ಕುಂಠಿತವಾಗಿರುವುದರಿಂದ, ಜಾಸ್ತಿ ಜನ ಇದ್ದಾರಲ್ಲಾ ಅಂತ ಅವರನ್ನು ಗಂಧದ ಕಡ್ಡಿಯನ್ನು ತಯಾರು ಮಾಡುವುದಕ್ಕೆ ಹಚ್ಚಿದ್ದೇವೆ. ಆದರೆ ನಾವು ಖಾಸಗಿಯವರೊಡನೆ ಕಾಂಪಿಟ್ ಮಾಡುವುದಕ್ಕೆ ಬಂಡವಾಳ ಬೇಕು. ಮತ್ತು ವಿದೇಶಗಳಲ್ಲಿ ಇದರ ಬಗ್ಗೆ ಪ್ರಚಾರ ಇಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ವಿಚಾರ ಮಾಡುತ್ತೇನೆ. ಪ್ರಚಾರ ಇಲ್ಲ ಅಂತ ಅಲ್ಲ. ಇವತ್ತು ಬೇರೆಯವರಿಗೆ ಸರಿಸಮಾನವಾದಂತಹ ಕ್ವಾಲಿಟಿಯನ್ನು ಮೈನ್‌ಟೈನ್ ಮಾಡುವುದರ ಬಗ್ಗೆ ಪ್ರಚಾರ ಬೇಕು. ಅದೇ ಏಕೆ, ಗಂಧದ ಎಣ್ಣೆ ಗೊತ್ತಿರತಕ್ಕಂತಹವರು, ಅದೇ ರೀತಿ ಮೈಸೂರು ಸ್ಯಾಂಡಲ್ ಸೋಪ್ ಗೊತ್ತಿರತಕ್ಕಂತಹ ಜನ ಪ್ರಪಂಚದ ಎಲ್ಲ ಕಡೆಯೂ ಇದ್ದಾರೆ. ಆದರೆ ಖಾಸಗಿ ಕಂಪನಿಯವರ ಜೊತೆಗೆ ಕಾಂಪಿಟ್ ಮಾಡುವಂತಹ ಸ್ಟ್ಯಾಂಡರ್ಡ್ ನಮ್ಮದು ಇಲ್ಲ.

ಗಂಗಾವತಿ ತಾಲ್ಲೂಕಿನಲ್ಲಿರುವ ಹಾಲು ಉತ್ಪಾದಕರ ಸಂಘಗಳು

೨೬೮೦. ಶ್ರೀ ರಂಗದೇವರಾಯಲು, (ಕನಕಗಿರಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಂಗಾವತಿ ತಾಲ್ಲೂಕಿನಲ್ಲಿರುವ ಹಾಲು ಉತ್ಪಾದಕರ ಸಂಘಗಳು ಎಷ್ಟು ?

ಆ) ಆ ಪೈಕಿ ಸಮರ್ಪಕವಾಗಿ ಮತ್ತು ಅಸಮರ್ಪಕವಾಗಿ ಕೆಲಸ ನಡೆಸುತ್ತಿರುವ ಸಂಘಗಳು ಎಷ್ಟೆಷ್ಟು ?

ಇ) ಅಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿರುವ ಸಂಘಗಳ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್, (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೨೨

ಆ) ೫ ಸಂಘಗಳನ್ನು ಕಾರ್ಯಾಚರಣೆಗೊಳಿಸಲಾಗಿದ್ದು, ಅವು ಸಮರ್ಪಕವಾಗಿ ಕೆಲಸ ನಡೆಸುತ್ತಿವೆ. ೧೭ ಸಂಘಗಳನ್ನು ಕಾರ್ಯಾಚರಣೆಗೊಳಿಸಲಾಗಿಲ್ಲ.

ಇ) ಕಾರ್ಯಾಚರಣೆಗೊಳಿಸಲಾಗದ ೧೭ ಸಹಕಾರ ಸಂಘಗಳನ್ನು ಗಂಗಾವತಿ ಶೀತಲೀಕರಣ ಕೇಂದ್ರ ಪ್ರಾರಂಭವಾದ ನಂತರ ಕಾರ್ಯಾಚರಣೆಗೊಳಿಸಲಾಗುವುದು.

೩-೦೦ ಪಿ.ಎಂ.

ಶ್ರೀ ಶ್ರೀ. ರಂಗದೇವರಾಯಲು.—ಅಧ್ಯಕ್ಷರೇ, ಅಲ್ಲಿ ೨೨ ಸೊಸೈಟಿಗಳು ಶೇರ್ ಹಣವನ್ನು ಕಟ್ಟಿವೆ. ಆದರೆ ಇವುಗಳಲ್ಲಿ ಕೇವಲ ೫ ಸೊಸೈಟಿಗಳನ್ನು ಕಾರ್ಯಗತ ಮಾಡಿದ್ದೀರಿ ಎಂದರೇ ಶೇಕಡಾ ೨೫ಕ್ಕಿಂತಲೂ ಇದು ಕಡಿಮೆ ಆಯಿತು. ಈ ಜನರು ಬಹಳ ಸಾರಿ ಜಿಲ್ಲಾಮಂತ್ರಿಗಳಿಗೆ ಭೇಟಿ ಮಾಡಿ ಮೆಮೋರಾಂಡಂಗಳನ್ನು ಕೊಟ್ಟಿರುತ್ತಾರೆ. ಇವರು ರಿಜಿಸ್ಟ್ರ ಮಾಡುತ್ತಲೇ ಇದ್ದಾರೆ ಅದಷ್ಟು ಜಾಗ್ರತೆ ಆಟ್ ಲೀಸ್ಟ್ ೭೫ ಪರ್ಸೆಂಟ್‌ನಷ್ಟಾದರೂ ಸಂಘಗಳನ್ನು ಕಾರ್ಯಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಲಕ್ಷ್ಮೀಸಾಗರ್.—ಇನ್ನು ೨–೩ ತಿಂಗಳ ಒಳಗೆ ಅವ್ಯಗಳ ಪ್ರಾರಂಭ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೇನೆಂದು ಶ್ರೀರಂಗದೇವರಾಯಲು ಅವರಿಗೆ ನಾನು ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಶ್ರೀ. ರಂಗದೇವರಾಯಲು.–ಅಧ್ಯಕ್ಷರೇ ನಾನುತಮ್ಮ ಮೂಲಕ ಈ ಬಗ್ಗೆ ಅವರಿಗೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ

ಶ್ರೀ ಪಿ. ಲಕ್ಷ್ಮೀಸಾಗರ್.—ಅಲ್ಲಿ ಯಂತ್ರೋಪಕರಣಗಳ, ವಿದ್ಯುದಾಗಾರದ ಕಾರ್ಯ ಆಗಿದೆ. ಅಲ್ಲಿ ನೀರಿನ ಸೌಕರ್ಯಕ್ಕೆ ಕೊಳವೆ ಬಾವಿ ತೋಡಲಾಗಿದ್ದು ಕೊಳವೆ ಬಾವಿಯಲ್ಲಿ ೪೦೦ ಗ್ಯಾಲನ್ ನೀರು ಬರುತ್ತಾ ಇದೆ. ಇದು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೇ ಇರುವುದರಿಂದ ನಗರಸಭೆಯು ಪತಿಯಿಂದ ನೀರನ್ನು ಪಡೆಯಬೇಕಾಗಿದ್ದು ಈ ಬಗ್ಗೆ ಅವರೂ ಕೂಡಾ ಒಪ್ಪಿರುತ್ತಾರೆ ಇದೆಲ್ಲಾ ಕೆಲಸಗಳು ಆಗಿರುತ್ತವೆ. ಆದ್ದರಿಂದ ಇನ್ನು ೩ ತಿಂಗಳ ಒಳಗೆ ಪ್ರಾರಂಭ ಮಾಡತಕ್ಕ ಪ್ರಯತ್ನ ನಡೆಯುತ್ತದೆನ್ನುವ ಭಾವನೆಯಿಂದ ಅವರಿಗೆ ಭರವಸೆ ಕೊಟ್ಟಿದ್ದೇನೆ.

ಮುಂದೂಡಲಾದ ಪ್ರಶ್ನೆಗಳು

ಲಭ್ಯವಿರುವ ಸ್ಯಾಟಲೈಟಿನ ಸೌಲಭ್ಯಗಳನ್ನು ಸರ್ಕಾರವು ಉಪಯೋಗಿಸಿಕೊಳ್ಳುವುದರ ಬಗ್ಗೆ

೧೬೮೧ ಶ್ರೀ ಆರ್.ಪಂಕಟರಾಮಯ್ಯ(ಮುಳಬಾಗಿಲು).–ಮಾನ್ಯ ಗಣಿ ಮತ್ತು ಭೂವಿಜ್ಞಾನ,ಯುವ ಜನ ಸೇವಾ ಹಾಗೂ ಕ್ರೀಡೆಗಳ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲಭ್ಯವಿರುವ ಸ್ಯಾಟಲೈಟಿನ ಸೌಲಭ್ಯಗಳನ್ನು ಸರ್ಕಾರ ಭೂಮಿಯೊಳಗಿನ ಅಂತರ್ಜಲದ ಅಸ್ತಿತ್ವವನ್ನು ಪತ್ತೆ ಮಾಡಲು ಉಪಯೋಗಿಸಿಕೊಳ್ಳುತ್ತಿದೆಯೆ ?

ಆ) ರಾಜ್ಯದಲ್ಲಿ ಹಲವಾರು ಪ್ರದೇಶಗಳನ್ನು ಕಪ್ಪು ಮತ್ತು ಭೂದು ಎಂದು ಘೋಷಿಸಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ ಸರ್ಕಾರವು ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಕಪ್ಪು ಮತ್ತು ಭೂದು ಎಂದು ಘೋಷಿಸಿರುವ ನಿರ್ಬಂಧಗಳನ್ನು ತೆಗೆದು ಹಾಕುವ ಸಾಧ್ಯತೆ ಇದೆಯೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನಸೇವಾ ಹಾಗೂ ಕ್ರೀಡೆಗಳ ರಾಜ್ಯ ಸಚಿವರು

ಅ) ಹೌದು

ಆ) ನಿಜ

ಇ) ಮೈಕ್ರೋ ಲೆವೆಲ್ ವಾಟರ್ ಸರ್ವೆ ಮಾಡಿದ ನಂತರ ಸಾಧ್ಯತೆಗಳು ಕಂಡು ಬಂದಲ್ಲಿ ನಿರ್ಬಂಧಗಳ ಪಡಿಲಿಕೆಯನ್ನು ಪರಿಗಣಿಸಲಾಗುವುದು.

ಶ್ರೀ ಆರ್. ಪಂಕಟರಾಮಯ್ಯ.—ಅಧ್ಯಕ್ಷರೇ, ರಾಜ್ಯದಲ್ಲಿ ಹಲವಾರು ಪ್ರದೇಶಗಳನ್ನು ಕಪ್ಪು ಮತ್ತು ಬೂದು ಎಂದು ಘೋಷಿಸಿರುವುದು ನಿಜವೆಂದು ಹೇಳಿದ್ದಾರೆ. ಇದು ಯಾವ ಯಾವ ಪ್ರದೇಶಗಳು ? ಮತ್ತೆ ಮೈಕ್ರೋ ಲೆವೆಲ್ ವಾಟರ್ ಸರ್ವೆ ಮಾಡಿದ ನಂತರ ನಿರ್ಬಂಧಗಳ ಪಡಿಲಿಕೆ ಬಗ್ಗೆ ಪರಿಗಣಿಸಲಾಗುವುದು ಎಂದು ಹೇಳಿದ್ದಾರೆ ಆದರೆ ಅನೇಕ ಕಡೆ ಈ ರೀತಿಯ ಸರ್ವೇ ಆಗಿದೆ ಮತ್ತೆ ರೀಸರ್ವೆ ಕೂಡಾ ಎಲ್ಲೆಲ್ಲಿ ಆಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅಧ್ಯಕ್ಷರೇ, ರಾಜ್ಯದಲ್ಲಿ ಒಟ್ಟು ೭ ಜಿಲ್ಲೆಗಳಲ್ಲಿ ಇಂತಹ ಪ್ರದೇಶಗಳನ್ನು ಘೋಷಿಸಲಾಗಿದೆ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಮತ್ತು ಹೊಸಕೋಟೆ ಇವುಗಳನ್ನು ಕಪ್ಪು ಎಂದು ಪರಿಗಣಿಸಲಾಗಿದೆ ಕೋಲಾರದ ಮುಳಬಾಗಿಲು, ಗೌರಿಬಿದನೂರು ಕಪ್ಪು ಭಾಗವೆಂದು,